ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕುಂಸಿ ಟೌನಿನಲ್ಲಿ ವೆಟರ್ನರಿ ಆಸ್ಪತ್ರೆ ಇದ್ದರೂ ಅಲ್ಲಿ ಸಾಕಷ್ಟು ಔಷಧಿ ಇಲ್ಲದೆ ಶಿವಮೊಗ್ಗದಿಂದ ಔಷದಿ ತರಿಸಬೇಕಾಯಿತು. ಅಲ್ಲಿಂದ ಔಷದಿ ತರಿಸುವವರೆಗೆ ಹಸುಗಳಿಗೆ ಹೆಚ್ಚು ತೊಂದರೆಯಾಗುವುದಿಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.—ಅಂತ್ರಾಕ್ಸ್ ಎಂಬ ದೊಡ್ಡ ರೋಗಕ್ಕೆ ಈಗ ಹೊಸದಾಗಿ ವ್ಯಾಕ್ಸೀನ್ ಕಂಡು ಹಿಡಿದಿದ್ದಾರೆ. ಇದನ್ನು ಕೇಂದ್ರ ಸರಕಾರದ ಮೂಲಕ ತರಿಸಿ ಹಂಚಲಾಗಿದೆ. ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ಇದರ ಸ್ಟಾಕ್ ಇಡಲಾಗಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಸ್ಪೆಷಲ್ ಸ್ಕ್ವಾಡ್ ಇಟ್ಟು ರೋಗ ಕಂಡ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು. ಮುಂಜಾಗ್ರತೆ ಕ್ರಮ ಕೈಕೊಂಡು ಟೆಲಿಗ್ರಾಂ ಮೂಲಕ ಸರಕಾರಕ್ಕೆ ತಿಳಿಸಬೇಕೆಂದೂ ಆದೇಶ ಕೊಡಲಾಗಿದೆ. ಜಿಲ್ಲಾ ಮಟ್ಟದಲ್ಲಿರುವ ಔಷಧಿ ತೆಗೆದುಕೊಂಡು ಜಾಗ್ರತ ತಜ್ಞರು ಅದನ್ನು ಉಪಯೋಗಮಾಡಿ ರೋಗ ತಡೆಗಟ್ಟುವರು. ನನಗೆ ಬಂದಿರುವ ಅಂಕಿಅಂಶದ ಪ್ರಕಾರ ನಾಲ್ಕೈದು ಪ್ರಾಣಿಗಳು ಸತ್ತಿವೆ. ಮಾನ್ಯ ಸದಸ್ಯರಲ್ಲಿ ಹೆಚ್ಚು ಮಾಹಿತಿ ಇದ್ದರೆ ತಿಳಿಸಿದರೆ ವಿಚಾರಿಸಿ ಸೂಕ್ತ ಕ್ರಮ ತೆಗೆದುಕೊಳ್ಳೋಣ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇವತ್ತಿಗೂ ಕೂಡ ಅನೇಕ ಹಸುಗಳು ತೀರಿ ಹೋದ ಮೇಲೂ ಕೂಡ ಆಸ್ಪತ್ರೆಗಳಲ್ಲಿ ಔಷಧಿಯಿಲ್ಲದೆ ಕೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆಯೇ ? ಶಿವಮೊಗ ಮತ್ತಿತರ ಕಡೆಗಳಿಂದ ಇಂದೂ ಕೂಡ ಔಷಧಿ ತರುತ್ತಿದ್ದಾರೆ. ಆದುದರಿಂದ ಇದನ್ನು ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಎನ್. ಚಿಕ್ಕೇಗೌಡ.—ವ್ಯಾಕ್ಸೀನ್ ಇಲ್ಲವೆಂಬುದನ್ನು ಒಪ್ಪಿಕೊಳ್ಳವುದಕ್ಕಾಗುವುದಿಲ್ಲ. ಬೇಕಾದಷ್ಟನ್ನು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ಇಡಲಾಗಿದೆ. ತಾಲ್ಲೂಕು ಮಟ್ಟದಲ್ಲಿ ರೆಫ್ರಿಜರೇಟರಿನಲ್ಲಿಟ್ಟು ವ್ಯಾಕ್ಸೀನನ್ನು ಯಾವ ದಿವಸ ಬೇಕಾದರೂ ಉಪಯೋಗಿಸಬಹುದು. ಮಾನ್ಯ ಸದಸ್ಯರ ಬಳಿ ಹೆಚ್ಚು ಮಾಹಿತಿ ಇದ್ದರೆ ಕೊಟ್ಟರೆ ವಿಚಾರಮಾಡಬಹುದು.

(iv) Re : *The irregularities committed by the Chairman of Service Co-operative Society, Nadepalle.*

Sri BAPU GOWDA RAYAPPA (Shahapur).—Madam, I beg to call the attention of the Minister for Co-operation to the irregularities committed by the Chairman of the Service Co-operative Society, Nadepalle.

Sri A. SHANKARA ALVA (Minister for Co-operation).—Sir, I state as follows :

It is a fact that Sri Devaraya Nadepalle is the Chairman of the Agricultural Credit Co-operative Society, Ltd., Nadepalle, which has been subsequently converted into Service Co-operative Society, Nadepalle. From the records, it is noticed that he has not misappropriated Rs. 18,704 of the Society. It is also noticed from the report of the Deputy Registrar that the members of the Managing Committee of the Society are not interested in recovering the amounts advanced to the members during the year 1968-69 which is of the order of Rs. 21,573.81. Further, it is stated that the President of the Society is incharge of the records and also got a balance of Rs. 11,118.19 without remitting the same to the District Central Co-operative Bank. This amount it is mentioned is kept with him

(Sri Shankara Alva)

for the last four years. Retention of cash balance by itself may not amount to misappropriation. However it is an irregularity under law, and has resulted in loss of interest to the Society. The Department considers this as a serious irregularity and the Assistant Registrar has been requested to supersede the committee of management under the provisions of Mysore Co-operative Societies Act 1959 as the management is not interested in running the Society for the benefit of the members. Last general body meeting of the Society was held during 1968-69 and thereafter there was neither any committee meeting nor annual general body meeting.

All the Directors including the President of the Society are defaulters. Hence, they cannot continue in office under the provisions of the bye-laws. There has been delay on the part of the Department to institute immediate action in not only recovering the cash balance retained by him for a long time but also removing the members of the committee of management. Separate action is being taken in respect of officials who have failed in their duty to look into the affairs of the Society and set right the same.

Government are not aware of any representation alleging misappropriation in the Society.

ಶ್ರೀ ಬಾಪುಗೌಡ ರಾಯಪ್ಪ.—ಅಧ್ಯಕ್ಷರೇ ಈ ಸೊಸೈಟಿಯಲ್ಲಿ ಆಡಿಟ್ ವರದಿ ಪ್ರಕಾರ 18,704 ರೂಪಾಯಿ ದುರುಪಯೋಗವಾಗಿದೆಯೆಂದು ಗೊತ್ತಾಗಿದೆ. ಸರಕಾರದ ವರದಿ ಪ್ರಕಾರ ಸುಮಾರು 11,118 ರೂಪಾಯಿ ಆಗಿದೆ. ಸುಮಾರು ನಾಲ್ಕು ವರ್ಷದಿಂದ ರಿಕಾರ್ಡು ಮತ್ತು ಹಣ ಕೂಡ ಅಧ್ಯಕ್ಷರಲ್ಲಿದೆ. ನಾಲ್ಕು ವರ್ಷದಿಂದ ಅವರ ಬಳಿ ಇದ್ದ ಹಣ ಮಿಸ್ ಅಪ್ರೊಪ್ರಿಯೇಟ್ ಆಗಿಲ್ಲವೆಂದು ಹೇಳುವುದು ಸರಿಯೇ ?

2—00 ಪಿ.ಎಂ.

ಶ್ರೀ ಎ. ಶಂಕರ್ ಆಳ್ವ.—ಕಾನೂನು ಪ್ರಕಾರ ಬರೀ ರಿಟೆನ್‌ಷನ್ ಆದರೆ ಸ್ಟ್ರಿಕ್ಚರ್ ಆಗುತ್ತದೆ. ದುರುಪಯೋಗವಾಗಿದೆ ಎಂದರೆ ಅವರು ಹಣವನ್ನು ಉಪಯೋಗಿಸಿಕೊಳ್ಳಬೇಕು. ಈ ವಿಷಯದಲ್ಲಿ ನಾನು ಆದೇಶ ಕೊಟ್ಟಿದ್ದೇನೆ. ಅದರ ಬಗ್ಗೆ ಪೋಲೀಸರಿಗೆ ಕಳುಹಿಸಿಕೊಟ್ಟು ತನಿಖೆ ಮಾಡಿ ಎಂದು ಆದೇಶ ಕೊಟ್ಟಿದ್ದೇನೆ.

ಶ್ರೀ ಬಾಪುಗೌಡ ರಾಯಪ್ಪ.—11,118—19 ರೂಪಾಯಿಗಳು ಸುಮಾರು ನಾಲ್ಕು ವರ್ಷದಿಂದ ದುರುಪಯೋಗವಾಗಿಲ್ಲ ಎಂದು ಹೇಳುತ್ತಾ ಇದ್ದೀರಿ. ಶ್ರೀ ದೇವರಾಯ ನಾಡಪಲ್ಲಿ ಇವರು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು. ಪ್ರತಿಭಾನ್ವಿತ ವ್ಯಕ್ತಿಗಳು. ಇವರು ತಮ್ಮ ಸ್ವಂತಕ್ಕೆ ಈ ಹಣವನ್ನು ಇಟ್ಟುಕೊಂಡಿದ್ದಾರೆ. ಇದು ದುರುಪಯೋಗವಾಗಿಲ್ಲ ಎನ್ನುವುದು ಸರ್ಕಾರದ ಭಾವನೆಯೇ ?

ಶ್ರೀ ಎ. ಶಂಕರ್ ಆಳ್ವ.—ನಾನು ಟೆಕ್ನಿಕಲ್ ಆಗಿ ಹೇಳಿದೆ. ಮಿಸ್‌ಅಪ್ರೊಪ್ರಿಯೇಷನ್ ಆಗಬೇಕಾದರೆ, ದುರುಪಯೋಗವಾಗಿದೆ ಎಂದು ರುಜುವಾತಾಗಬೇಕು. ಬರೀ ಒಬ್ಬನು ಹಣವನ್ನು ಇಟ್ಟುಕೊಂಡರೆ ಸ್ಟ್ರಿಕ್ಟ್‌ಲಿ ಅದು ಮಿಸ್‌ಅಪ್ರೊಪ್ರಿಯೇಷನ್ ಆಗುವುದಿಲ್ಲ. ಮಿಸ್‌ಅಪ್ರೊಪ್ರಿಯೇಷನ್ ಆಗಬೇಕಾದರೆ ಅದನ್ನು ದುರುಪಯೋಗಪಡಿಸಿಕೊಂಡಿದ್ದು ರುಜುವಾತುಪಡಿಸಬೇಕು. ಆದ್ದರಿಂದ ಆಫೀಸರ್ಸ್ ಯಾರು ಯಾರು ಇದಕ್ಕೆ ಸೇರಿದ್ದಾರೆ ಎಂಬುದನ್ನೂ ಕೂಡ ತನಿಖೆ ಮಾಡಲಿಕ್ಕೆ ಹೇಳಿದ್ದೇನೆ. ಈಗತಾನೇ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಅದನ್ನು ಸೂಪರ್‌ಸೀಡ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡು ಆದೇಶ ಕೊಟ್ಟಿದ್ದಾರೆ.

ಶ್ರೀ ಬಾಪೂಗೌಡ ರಾಯಪ್ಪ.—ಸುಮಾರು ನಾಲ್ಕು ವರ್ಷಗಳಿಂದ ಕೇವಲ ಒಂದು ವ್ಯಕ್ತಿಯಲ್ಲಿ ರಿಕಾರ್ಡು ಇಟ್ಟುಕೊಂಡು, ಹಣವನ್ನು ಇಟ್ಟುಕೊಂಡರೆ ದುರುಪಯೋಗವಾಗಿಲ್ಲ ಎಂದು ಹೇಳುತ್ತಾ ಇದ್ದೀರಿ. ನಾಲ್ಕು ವರ್ಷದಿಂದ 11 ಸಾವಿರ ರೂಪಾಯಿಗಳನ್ನು ತನ್ನ ಸ್ವಂತಕ್ಕೆ ಉಪಯೋಗ ಮಾಡಿಕೊಂಡಂಥ ವ್ಯಕ್ತಿಯ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎ. ಶಂಕರ್ ಆಳ್ವ.—ಈ ಅಪರಾಧ ಟೆಕ್ನಿಕಲ್ ಎವಿಡೆನ್ಸ್ ಆಗುತ್ತದೆ ಎನ್ನುವ ಮಟ್ಟಕ್ಕೆ ಹೇಳಿದ್ದೇನೆ, ಸೊಸೈಟಿಯ ಹಣವನ್ನು ಪ್ರೆಸಿಡೆಂಟ್ ಆದವರು ಇಟ್ಟುಕೊಂಡರೆ ಅದನ್ನು ದುರುಪಯೋಗಪಡಿಸಿದಂತಾಗುವುದಿಲ್ಲ. ಅದು ಸ್ಟ್ರಿಕ್ಟ್ ಆಗಿ ದುರುಪಯೋಗವಾಗುವುದಿಲ್ಲ. ಸೊಸೈಟಿಯವರು ಕೇಳಿದ ಕೂಡಲೇ ಹಣವನ್ನು ಕೊಡದಿದ್ದರೆ ಅದು ದುರುಪಯೋಗ ಮಾಡಿದಂತಾಗುತ್ತದೆ. ಇದನ್ನೂ ಸಹ ಪರಿಶೀಲಿಸುವುದಕ್ಕೆ ಹೇಳಿದ್ದೇನೆ. ಮತ್ತು ತನಿಖೆ ಮಾಡಲಿಕ್ಕೆ ಪೋಲೀಸರನ್ನು ಕಳುಹಿಸಿಕೊಟ್ಟು ಆದೇಶ ಕೊಟ್ಟಿದ್ದೇನೆ.

ಶ್ರೀ ಬಾಪೂಗೌಡ ರಾಯಪ್ಪ.—ನಾಲ್ಕು ವರ್ಷದಿಂದ ಸತತವಾಗಿ ಒಬ್ಬ ವ್ಯಕ್ತಿ ರಿಸರ್ವ್ ಬ್ಯಾಂಕಿನ 11 ಸಾವಿರ ರೂಪಾಯಿಗಳ ಹಣವನ್ನು ಇಟ್ಟುಕೊಂಡಿದ್ದರೆ ಅದು ದುರುಪಯೋಗವಲ್ಲ ಎಂದು ಹೇಳುತ್ತಾ ಇದ್ದೀರಿ, ತಮ್ಮ ಅಧಿಕಾರಿಗಳು ಹತ್ತು ಪೈಸೆಯನ್ನು ಒಂದು ತಾಸು ಇಟ್ಟುಕೊಂಡರೆ ಅದನ್ನು ಮಿಸ್ ಅಪ್ರೊಪ್ರಿಯೇಷನ್ ಎಂದು ಹೇಳುತ್ತೀರಿ, ಇದು ಮಿಸ್ ಅಪ್ರೋಪ್ರಿಯೇಷನ್ ಕೇಸು ಆಗುವುದಿಲ್ಲವೇ ?

ಶ್ರೀ ಎ. ಶಂಕರ್‌ಆಳ್ವ.—ಟೆಕ್ನಿಕಲಿ ಹಣ ಇಟ್ಟುಕೊಂಡರೆ ಅದು ಆಫೆನ್ಸ್ ಆಗುವುದಿಲ್ಲ. ಅದನ್ನು ಕನ್‌ವರ್ಷನ್ ಮಾಡಿದರೆ ಮಾತ್ರ ಅದು ಆಫೆನ್ಸ್ ಆಗುತ್ತದೆ. ತಮಗೆ ಕ್ರಿಮಿನಲ್ ಕೇಸ್‌ಗಳ ಬಗ್ಗೆ ಗೊತ್ತಿರಬೇಕು. ಹಣವನ್ನು ದುರುಪಯೋಗಪಡಿಸಿದ್ದಾರೆ ಎನ್ನುವುದು ರುಜುವಾತಾಗಬೇಕು. ಹಣವನ್ನು ಜೇಬಿನಲ್ಲಿ ಇಟ್ಟುಕೊಂಡ ತಕ್ಷಣ ದುರುಪಯೋಗವಾಗುತ್ತದೆ ಎನ್ನುವುದು ಅಲ್ಲ. ಅದು ಸ್ಟ್ರಿಕ್ಟ್ ಆಗಿ ಆಫೆನ್ ಆಗುವುದಿಲ್ಲ. ಇದನ್ನೆಲ್ಲಾ ವಿಚಾರ ಮಾಡಬೇಕು ಎಂದು ಆದೇಶ ಕೊಟ್ಟಿದ್ದೇನೆ.

MATTERS RAISED UNDER RULE 312

(i) Re : *News item in a newspaper against behaviour of Minister of State.*

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ರಾಜ್ಯ ಸಚಿವರೊಬ್ಬರ ಮನೆಯಿಂದ ಆಶ್ರಮಕ್ಕೆ ಸೇರಿದ ಯುವತಿಯ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿದೆ. ಆ ಯುವತಿ ಯಾರು ? ಯಾವ ರಾಜ್ಯ ಸಚಿವರ ಮನೆಯಿಂದ ಬಂದಿದ್ದಾರೆ, ಅವಿವಾಹಿತ ಮಹಿಳೆಯನ್ನು ಬಲಾತ್ಕಾರವಾಗಿ ಮನೆಯಿಂದ ಹೊರಗೆ ಕಳುಹಿಸಿ, ಇವಳನ್ನು ಪೋಲೀಸರು ಬಲಾತ್ಕಾರವಾಗಿ ತೆಗೆದುಕೊಂಡು ಹೋಗಿ ಬನ್ನೇರುಘಟ್ಟದ ಆಶ್ರಮಕ್ಕೆ ಸೇರಿಸಿದ್ದಾರೆ. ಈಕೆ ಅವಿವಾಹಿತಳೆಂದೂ ಮುಂಬೈ ನಿವಾಸಿಯೆಂದೂ ತಿಳಿದುಬಂದಿದೆ. ಸಚಿವರ ಆದೇಶದಂತೆ ಮುನಿರೆಡ್ಡಿ ಪಾಳ್ಯ ಪೋಲೀಸ್ ಠಾಣೆಯ ಓರ್ವ ಹೆಡ್ ಕಾನ್ಸ್‌ಟೇಬಲ್ ಈ ಯುವತಿಯನ್ನು ಅವರ ಮನೆಯಿಂದ ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಈ ಆಶ್ರಮಕ್ಕೆ ಸೇರಿಸಿದ್ದನೆಂದೂ ವಿಶ್ವಾಸನೀಯವಾಗಿ ತಿಳಿದುಬಂದಿದೆ.

ಇದರಲ್ಲಿ ಈಗಿನ ರಾಜ್ಯ ಸಚಿವರೊಬ್ಬರ ಮನೆಯಿಂದ ಯುವತಿಯನ್ನು ಬಲಾತ್ಕಾರವಾಗಿ ಕರೆದುಕೊಂಡು ಹೋಗಿ ಆಶ್ರಮಕ್ಕೆ ಸೇರಿಸಿದ್ದಾರೆ. ಸಚಿವರು ಶನಿವಾರ ನಗರದ ಹಿರಿಯ ಪೋಲೀಸ್ ಅಧಿಕಾರಿಯೊಬ್ಬರಿಗೆ ಫೋನ್ ಮಾಡಿ ಈ ಯುವತಿಯನ್ನು ತಮ್ಮ ಮನೆಯಿಂದ ಹೊರಗೆ ಹಾಕುವಂತೆ ತಿಳಿಸಿದರೆಂದೂ ಸ್ಥಳಕ್ಕೆ ಭೇಟಿ ನೀಡಿದ್ದ ಅಧಿಕಾರಿಗಳು ಈ ಬಗ್ಗೆ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರೆಂದೂ ಗೊತ್ತಾಗಿದೆ. ಆದಾದ ನಂತರ ಸಚಿವರ ಆಪ್ತ ಸಹಾಯಕರೊಬ್ಬರು ಮುನಿರೆಡ್ಡಿ ಪಾಳ್ಯ ಪೋಲೀಸ್ ಠಾಣೆಗೆ ಟೆಲಿಫೋನ್ ಮಾಡಿ ಈ ಯುವತಿಯನ್ನು ಸಚಿವರ ಮನೆಯಿಂದ ಹೊರಗೆ ಹಾಕಲು ತಿಳಿಸಿದರೆಂದೂ ಹೆಡ್ ಕಾನ್ಸ್‌ಟೇಬಲ್ ಕೂಡಲೇ ಅವರ ಮನೆಗೆ ಧಾವಿಸಿ ಟ್ಯಾಕ್ಸಿಯೊಂದರಲ್ಲಿ ಆಕೆಯನ್ನು ಬನ್ನೇರುಘಟ್ಟ ರಸ್ತೆಯ ಆಶ್ರಮವೊಂದರಲ್ಲಿ ಬಿಟ್ಟು ಬಂದನೆಂದೂ ಅನಂತರ ಈ ಬಗ್ಗೆ ಸಬ್ ಇನ್ಸ್‌ಪೆಕ್ಟರ್ ಅವರಿಗೆ ವರದಿ ಮಾಡಿದನೆಂದೂ ಗೊತ್ತಾಗಿದೆ. ಈ ವಿಷಯ ಗೊತ್ತಾದನಂತರ ಪೋಲೀಸರು ಆಶ್ರಮಕ್ಕೆ ತೆರಳಿ ಯುವತಿಗಾಗಿ ಶೋಧಿಸಿದರೆಂದೂ ಆಕೆಯನ್ನು ಹುಡುಕಲು ಸಾಧ್ಯವಾಗಲಿಲ್ಲವೆಂದು ತಿಳಿದುಬಂದಿದೆ. ಪೋಲೀಸ್ ಕಮಿಷನರ್ ಅವರು ಈ ಬಗ್ಗೆ ವಿವರವಾದ ಒಂದು ವರದಿಯನ್ನು ರಾಜ್ಯ ಪೋಲೀಸ್ ಮುಖ್ಯಾಧಿಕಾರಿಗಳಿಗೆ ಕಳುಹಿಸಿದ್ದರೆಂದೂ ಗೊತ್ತಾಗಿದೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಸಚಿವರ ಮನೆಯಲ್ಲಿ ದೊಡ್ಡ ಗದ್ದಲ ನಡೆದಿದೆ. ನಡೆದ ಮೇಲೆ ಆಕೆಯನ್ನು ಹೊರಗಡೆ ಕಳುಹಿಸಿಕೊಡುವುದಕ್ಕೆ ಆಪ್ತ ಕಾರ್ಯದರ್ಶಿಗಳು ಪೋಲೀಸ್ ಸ್ಟೇಷನ್‌ಗೆ ಫೋನ್ ಮಾಡಿ.....